## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.1812/2015/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:27.6.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯು:-** ದೇವನಹಳ್ಳಿ ತಾಲ್ಲೂಕು ಧರ್ಮಪುರ ಗ್ರಾಮದ ಸರ್ವೆ ನಂ.1 ಮತ್ತು 22ರಲ್ಲಿ ಅಕ್ರಮವಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಖಾತೆ ಮಾಡಿಕೊಂಡು ಸ್ವಾಧೀನಾನುಭವದಲ್ಲಿದ್ದ 18 ಜನರು ಹಾಗೂ ಸರ್ವೆ ನಂ.22ರಲ್ಲಿ ಇದೇ ರೀತಿ ಅಕ್ರಮವಾಗಿ ಖಾತೆ ಹೊಂದಿರುವ ಜನರ ಖಾತೆಗಳನ್ನು ರದ್ದುಗೊಳಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳಲು ಸಂಬಂಧಪಟ್ಟವರಿಗೆ **ನಿರ್ದೇಶನ** ನೀಡುವ ಬಗ್ಗೆ.

ಶ್ರೀ ಅಂಜಿನಪ್ಪ, ವಕೀಲರು, ಧರ್ಮಪುರ ಗ್ರಾಮ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಸಹಾಯಕ ಆಯುಕ್ತರು, ದೊಡ್ಡಬಳ್ಳಾಪುರ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಧರ್ಮಪುರ ಗ್ರಾಮದ ಸರ್ವೆ ನಂ.1 ಮತ್ತು 22ರಲ್ಲಿ ಸುಮಾರು 18 ಜನರು ಅನಧಿಕೃತವಾಗಿ ಅತಿಕ್ರಮಿಸಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಖಾತೆ ಮಾಡಿಸಿಕೊಂಡು ಅನುಭವದಲ್ಲಿರುತ್ತಾರೆ. ಈ ಖೊಟ್ಟಿ ದಾಖಲೆಗಳನ್ನು ರದ್ದುಗೊಳಿಸಿ ಭೂಗಳ್ಳರಿಂದ ಸರ್ಕಾರಿ ಜಮೀನನ್ನು ವಶಪಡಿಸಿಕೊಳ್ಳುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಈ ಮೊದಲು ಬಿಡಿ.710/2009 ಅಂತ ಇದೇ ವಿಷಯದ ಬಗ್ಗೆ ದೂರು ದಾಖಲಿಸಿದ್ದು, ಅದರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ದೇವನಹಳ್ಳಿಯ ಕ್ಯಾಂಪಿನಲ್ಲಿ ಈ ಬಗ್ಗೆ ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಿದ್ದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಸರ್ಕಾರಿ ಜಮೀನನ್ನು ಕಾಪಾಡಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರಿಗೆ ಆಕ್ಷೇಪಣೆ ಕೋರಿ ನೋಟೀಸು ಕಳುಹಿಸಿದರೂ ಸಹ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗಿದೆ.

4. ದೂರುದಾರರು ಸಲ್ಲಿಸಿದ ದೂರು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಸರ್ವೆ ನಂ.1 ಒಟ್ಟು ಕ್ಷೇತ್ರ 160.10 ಎಕರೆ ಹಾಗೂ ಸರ್ವೆ ನಂ.22 ಒಟ್ಟು ಕ್ಷೇತ್ರ 95.26 ಎಕರೆ ಸರ್ಕಾರಿ ಗೋಮಾಳ ಜಮೀನಾಗಿರುತ್ತದೆ. ಆದರೆ ಈ ಜಮೀನಿನಲ್ಲಿ ಸುಮಾರು 18 ಜನರು ಅಕ್ರಮವಾಗಿ ಸ್ವಾಧೀನಹೊಂದಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ತಮ್ಮ ಹೆಸರಿನಲ್ಲಿ ಖಾತೆ ದಾಖಲಿಸಿಕೊಂಡು ಅನುಭವಿಸುತ್ತಿದ್ದಾರೆಂದು ದಾಖಲೆಗಳಿಂದ ಕಂಡುಬರುತ್ತದೆ. ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಸರ್ವೆ ನಂ.1ರಲ್ಲಿ ಖಾತೆ ಮಾಡಿಕೊಂಡು ಸ್ವಾಧೀನ ಹೊಂದಿರುವ ವ್ಯಕ್ತಿಗಳ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಮಂಜೂರಿದಾರರ ಹೆಸರು ಮತ್ತು ಪೂರ್ಣ ವಿಳಾಸ | ಜಾತಿ | ವಿಸ್ತೀರ್ಣ |
|---|---|---|---|
| 1 | ಸಿ.ನಾರಾಯಣಸ್ವಾಮಿ ಬಿನ್ ಚಿಕ್ಕಮೋಟಪ್ಪ | ಒಕ್ಕಲಿಗ | 1–20 |
| 2 | ಪಾರ್ವತಮ್ಮ ಕೋಂ.ಹೆಚ್.ಮುನಿಯಪ್ಪ | ಕುರುಬ | 1–00 |
| 3 | ಮುನಿಯಮ್ಮ ಬಿನ್ ಮುನಿಯಪ್ಪ | ಆದಿ ಕರ್ನಾಟಕ | 0–30 |
| 4 | ಮುನಿಕೃಷ್ಣಪ್ಪ ಬಿನ್ ಮುನಿಶಾಮಪ್ಪ | ಕುರುಬ | 1–00 |
| 5 | ಮುನಿಕೃಷ್ಣ ಬಿನ್ ಚೌಡಪ್ಪ | ಒಕ್ಕಲಿಗ | 1–20 |
| 6 | ನಾಗರಾಜ ಬಿನ್ ಮುನಿವೆಂಕಟಪ್ಪ | ಕುರುಬ | 1–00 |
| 7 | ಮುನೇಗೌಡ ಬಿನ್ ಕರಿಯಣ್ಣ | ಒಕ್ಕಲಿಗ | 1–00 |
| 8 | ರಾಮಕ್ಕ ಕೋಂ ಸಿದ್ದಲಿಂಗಪ್ಪ | ಕುರುಬ | 1–08 |
| 9 | ಚಿಕ್ಕರಾಮಪ್ಪ ಬಿನ್ ಮುನಿಶಾಮಪ್ಪ | ಕುರುಬ | 1–11 |
| 10 | ದೊಡ್ಡರಾಮಪ್ಪ ಬಿನ್ ಮುನಿಶಾಮಪ್ಪ | ಕುರುಬ | 1–05 |
| 11 | ಮುನಿತಾಯಮ್ಮ ಕೋಂ ಲೇಟ್ ಮುನಿಶಾಮಪ್ಪ | ಕುರುಬ | 0–32 |
| 12 | ಎಂವೆಂಕಟೇಶ್ ಬಿನ್ ಮುನಿಯಪ್ಪ | ಕುರುಬ | 1–06 |
| 13 | ಚನ್ನಪ್ಪ ಬಿನ್ ಗುಳ್ಳಪ್ಪ | ಒಕ್ಕಲಿಗ | 0–20 |
| 14 | ರಂಗಯ್ಯ ಬಿನ ಗುಳ್ಳಪ್ಪ | ಒಕ್ಕಲಿಗ | 0–20 |
| 15 | ಅಕ್ಕಮ್ಮ ಕೋಂ ಆಂಜಿನಪ್ಪ | ಕುರುಬ | 1–00 |
| 16 | ಆನಂದಮೂರ್ತಿ ಬಿನ್ ಎ.ಕೆಂಪಣ್ಣ | ಒಕ್ಕಲಿಗ | 0–16 |
| 17 | ಚಿಕ್ಕಣ್ಣ ಬಿನ್ ಲೇಟ್ ಹನುಮಂತರಾಯಪ್ಪ | ಒಕ್ಕಲಿಗ | 0–16 |
| 18 | ಪದ್ಮಮ್ಮ ಕೋಂ ಲೇಟ್ ನಾಗರಾಜಪ್ಪ | ಒಕ್ಕಲಿಗ | 3–16 |

5. ದೇವನಹಳ್ಳಿ ತಾಲ್ಲೂಕು ಭೂ ಸಕ್ರಮೀಕರಣ ಸಮಿತಿಯು 4.2.2004ರಲ್ಲಿ ನಡೆಸಿರುವ ಸಭೆಯಲ್ಲಿ ಈ 18 ಜನರಿಗೆ ಜಮೀನು ಮಂಜೂರು ಮಾಡಿರುವುದು ಕಂಡುಬರುವುದಿಲ್ಲ. ಗೌರವಾನ್ವಿತ ಉಪಲೋಕಾಯುಕ್ತರು ದಿ.1.12.2013ರಂದು ದೇವನಹಳ್ಳಿಯಲ್ಲಿ ಸಾರ್ವಜನಿಕ ಕುಂದುಕೊರತೆ ವಿಚಾರಣೆ ವೇಳೆ ಸರ್ವೆ ನಂ.1 ಹಾಗೂ 22ರ ಬಗ್ಗೆ ಪರಿಶೀಲಿಸಿ ಈ ಜಮೀನಿನ ಬಗ್ಗೆ ಅಕ್ರಮ ಖಾತೆಗಳನ್ನು ರದ್ದುಗೊಳಿಸಿ ವರದಿ ನೀಡುವಂತೆ ಎದುರುದಾರರಿಗೆ ಆದೇಶ ನೀಡಿದ್ದರು.

6. ಮಾನ್ಯ ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಅವರು ತಮ್ಮ ನ್ಯಾಯಾಲಯದ ಪ್ರಕರಣ ಸಂ.ಆರ್.ಯುಸಿ(ಎ)2/2016-17ರಲ್ಲಿ ಸರ್ವೆ ನಂ.1ರ ಬಗ್ಗೆ ಮೇಲ್ಕಂಡ 18 ಜನರಿಂದ ದಾಖಲೆ ಹಾಗೂ ಹೇಳಿಕೆಗಳನ್ನು ಪಡೆದು ಪರಿಶೀಲಿಸಿ ಈ ಎಲ್ಲ ಮಂಜೂರುದಾರರ ಹೆಸರುಗಳು ಸಾಗುವಳಿ ಚೀಟಿಯಲ್ಲಿ ದಾಖಲಾಗಿರುವುದಿಲ್ಲ. ತಹಶೀಲ್ದಾರರ ಅಧಿಕೃತ ಜ್ಞಾಪನ ಸಂ.ಎಲ್.ಎನ್.ಡಿ.ಆರ್.ಯುಸಿ.ಎಸ್.ಆರ್.60/98-99ಕ್ಕೆ ದಿನಾಂಕವನ್ನು ನಮೂದಿಸಿರುವುದಿಲ್ಲ, ಯಾವ ದಿನಾಂಕದಂದು ಈ ಆದೇಶವನ್ನು ಹೊರಡಿಸಲಾಯಿತು ಎಂಬುವ ಮಾಹಿತಿ ಇರುವುದಿಲ್ಲ. ನಮೂನೆ 54ರ ಅರ್ಜಿಗಳನ್ನು ಭರ್ತಿಮಾಡಿ ವಿವರಗಳನ್ನು ನಮೂದಿಸಿರುವುದಿಲ್ಲ, ಇತ್ಯಾದಿಯಾಗಿ ಅನೇಕ ಅಕ್ರಮಗಳು ಕಂಡುಬಂದಿರುವುದರಿಂದ ಈ ಮೇಲ್ಕಂಡ 18 ಜನರಿಗೆ ಜಮೀನು ಮಂಜೂರುಮಾಡಿರುವುದು ಕಂಡುಬಂದಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಅಲ್ಲದೆ ಭೂ ಕಂದಾಯ ನಿಯಮ 1966ರ ನಿಯಮ 108ರಡಿ ಹೇಳಿರುವ ಪ್ರಕ್ರಿಯೆಗಳನ್ನು ಮಾಡಿಲ್ಲವೆಂದು ಹಾಗೂ ನಿಯಮಗಳನ್ನು ಉಲ್ಲಂಘಿಸಿದ್ದಾರೆಂದು ಆದೇಶದಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಈ 18 ಜನರ ಮಂಜೂರಾತಿಗಳನ್ನು ವಜಾಕರಿಸಿ ಸರ್ಕಾರದ ವಶಕ್ಕೆ ಜಮೀನು ಪಡೆದುಕೊಳ್ಳಲು ತಹಶೀಲ್ದಾರ್ ರವರಿಗೆ ಆದೇಶ ನೀಡಿರುತ್ತಾರೆ. ಇದರಿಂದ ಕಂಡುಬರುವುದೇನೆಂದರೆ ಸರ್ವೆ ನಂ.1 ಹಾಗೂ 22ರಲ್ಲಿ ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿ ಸ್ವಾಧೀನ ಹೊಂದಿದ್ದಾರೆಂದು ಕಂಡುಬರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೇವನಹಳ್ಳಿ ತಾಲ್ಲೂಕು ಧರ್ಮಪುರ ಗ್ರಾಮದ ಸರ್ವೆ ನಂ.1 ಮತ್ತು 22ರಲ್ಲಿ ಅಕ್ರಮವಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಖಾತೆ ಮಾಡಿಕೊಂಡು ಸ್ವಾಧೀನಾನುಭವದಲ್ಲಿದ್ದ ಮೇಲ್ಕಂಡ 18 ಜನರು ಹಾಗೂ ಸರ್ವೆ ನಂ.22ರಲ್ಲಿ ಇದೇ ರೀತಿ ಅಕ್ರಮವಾಗಿ ಖಾತೆ ಹೊಂದಿರುವ ಜನರ ಖಾತೆಗಳನ್ನು

ರದ್ದುಗೊಳಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ **ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**